**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.576/2023**

ಪಿರ್ಯಾದಿದಾರರು : ಗಬ್ಬೂರು ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿ: 1. ಬುಸಣ್ಣ ತಂದೆ ಕರಿಬಸಪ್ಪ, ವಯಸ್ಸುಃ 55 ವರ್ಷಗಳು,
ಉಃ ವ್ಯಾಪಾರಿ, ಸಾಃ ಖಾನಾಪೂರ,
ತಾಃ ದೇವದುರ್ಗ, ಜಿಲ್ಲೆಃ ರಾಯಚೂರು.

**ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಫ್ರಾಸಾ-1 ಶಂಕರ ತಂದೆ ಬಸವರಾಜ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.04.2023 ರಂದು ಸಂಜೆ 05.15 ಗಂಟೆಗೆ ನಾನು, ದೇವೆಂದ್ರ ಮತ್ತು ಚುಕ್ಕೆಪ್ಪ ಠಾಣೆಯಲಿ ಇದ್ದಾಗ ಪಿಎಸ್ಐ ಇವರು ನಮ್ಮನ್ನು ಕರೆಸಿ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಬಾತ್ಮಿ ಮೇರೆಗೆ ತಿಳಿಸಿದ್ದು ತಕ್ಷಣ ಬೂದೆಪ್ಪ ಮತ್ತು ರವಿ ಇವರನ್ನು ಬರ ಮಾಡಿಕೊಂಡು ಸರಕಾರಿ ವಾಹನದಲ್ಲಿ ಹೋಗಿ ಗುಡಿಯ ಹಿಂದೆ ಜೀಪನ್ನು ಮರೆಯಲ್ಲಿ ನಿಲ್ಲಿಸಿ ನೋಡಲಾಗಿ ಒರ್ವ ವ್ಯಕ್ತಿ ಗುಡಿ ಮುಂದೆ ತನ್ನ ಕಿರಾಣಿ ಮುಂದೆ ಅಕ್ರಮ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ

ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಜನ ಸುತ್ತುವರೆದು ನಿಂತು ಮಧ್ಯವನ್ನು ಖರೀದಿ ಮಾಡುತ್ತಿದ್ದರು, ತಕ್ಷಣ ನಾವು ದಾಳಿ ಮಾಡಿದಾಗ ಜನರು ಮತ್ತು ಮಾರಾಟಗಾರನು ಓಡಿ ಹೋಗಿದ್ದು, ಓಡಿ ಹೋದ ವ್ಯಕ್ತಿ ಹೆಸರು ವಿಚಾರಿಸಿದಾಗ ಬುಸಣ್ಣ ತಂದೆ ಕರಿಬಸ್ಸಪ್ಪ ಎಂದು ತಿಳಿದು ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್ ಓ.ಸಿ ಡಿಲಕ್ಸ್ ವಿಸ್ಕಿ 50 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಡು ಅವುಗಳಲ್ಲಿ ಇದ್ದ 1 ಪೌಚನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಪ್ರತ್ಯೇಕವಾಗಿ ತೆಗೆಯಲಾಗಿರುತ್ತದೆ. ನಂತರ ಜಪ್ತಿ ಪಡಿಸಿಕೊಂಡ ಅಕ್ರಮ ಮಧ್ಯವನ್ನು ಪಿಎಸ್ಐ ಇವರು ನಮ್ಮ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಆ ಕುರಿತು ನನ್ನ ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-2 ಪ್ರಕಾಶ ಸಿ. ಗೋವಿಂದಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 17-04-2023 ರಂದು ಸಂಜೆ 05.15 ಗಂಟೆಗೆ ನಾನು ಠಾಣ ಪ್ರಚಾರದಲ್ಲಿ ಇದ್ದಾಗ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟದ ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಫ್ರಾಸಾ- ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಬಾತ್ಮಿ ಮೇರೆಗೆ ತಕ್ಷಣ ಸಿಬ್ಬಂದಿ ಮೂಲಕ ಪಂಚರನ್ನು ಬರ ಮಾಡಿಕೊಂಡು ಸಿಬ್ಬಂದಿ ಜೊತೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ದಾಳಿ ಮಾಡಿದಾಗ ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿ ಹೋಗಿದ್ದು ಆತನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಬಸ್ಸಣ್ಣ ತಂದೆ ಕರಿ ಬಸ್ಸಪ್ಪ ಎಂದು ತಿಳಿದು ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಸ್ಥಳದಲ್ಲಿ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ ಓ.ಸಿ ಡಿಲಕ್ಸ್ ವಿಸ್ಕಿ 50 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳಲ್ಲಿ ಒಂದು ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಪಿಆರ್ ಓ ಎಂದು ಸೀಲ್ ಮಾಡಿಲಾಗಿರುತ್ತದೆ. ನಂತರ ಠಾಣೆಗೆ ಬಂದು ಜಪ್ತಿ ಮಾಡಿದ ಮುಮಾ, ದೂರು ಮತ್ತು ಪಂಚನಾಮೆ ಜೊತೆ ಬಂಡಯ್ಯ ರವರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-9) ಫ್ರಾಸಾ-4 ದೇವೇಂದ್ರ ತಂದೆ ಹನುಮಂತ್ರಾಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 13.04.2023 ರಂದು ಸಂಜೆ 05.15 ಗಂಟೆಗೆ ನಾನು, ಪಿಸಿ ಚುಕ್ಕಪ್ಪ, ಪಿಸಿ ಶಂಕರ ಠಾಣೆಯಲ್ಲಿ ಇದ್ದಾಗ ಪಿಎಸ್ಐ ಇವರು ನಮ್ಮನ್ನು ಕರೆಸಿ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-10) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಬಾತ್ಮಿ ಬಂದ ತಕ್ಷಣ ದಾಳಿ ಮಾಡುವುದು ಇದೆ ಎಂದು ಹೇಳಿ ಬೂದೆಪ್ಪ ಮತ್ತು ರವಿ ಪಂಚರೊಂದಿಗೆ

ಇಲಾಖ ವಾಹನದಲ್ಲಿ ಸಂಜೆ 05.30 ಗಂಟೆಗೆ ಠಾಣೆಯಿಂದ ಹೊರಟು ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹಿಂದೆ ಮರೆಯಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಸುತ್ತಲು ಜನರು ನಿಂತು ಮಧ್ಯದ ಪೌಚುಗಳನ್ನು ಖರೀದಿಸುತ್ತಿದ್ದರು ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-11) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ತಕ್ಷಣ ಪಂಚರೊಂದಿಗೆ 05.45 ಗಂಟೆಗೆ ದಾಳಿ ಮಾಡಿದ್ದು ಸ್ಥಳದಿಂದ ಜನರು ಮತ್ತು ಮಧ್ಯದ ಮಾರಾಟ ಮಾಡುತ್ತಿದ್ದವನು ಸಹ ಓಡಿ ಹೋಗಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ವಿಳಾಸ ವಿಚಾರಿಸಲಾಗಿ ಆತನ ಹೆಸರು ಬೂಸಣ್ಣ ತಂದೆ ಕರಿಬಸ್ಸಪ್ಪ ಎಂದು ಗೊತ್ತಾಗಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-12) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ಒ.ಸಿ ಡಿಲಕ್ಸ ವಿಸ್ಕಿಯ 50 ಪೌಚುಗಳು ಇದ್ದು ಅವುಗಳನ್ನು ರಾಸಾಯನಿಕ ಪರೀಕ್ಷೆ ಕುರಿತು ಒಂದು ಪೌಚನ್ನು ಪ್ರತ್ಯೇಕವಾಗಿ ತೆಗೆದು ಪ್ಯಾಕ್ ಮಾಡಿ ಪಿ.ಎಸ್.ಐ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿ ಸಿರುತ್ತೇವೆ. ಪಂಚನಾಮೆಯನ್ನು ಸಂಜೆ 05.45 ರಿಂದ 06.45 ಗಂಟೆ ವರೆಗೆ ಮಾಡಿರುತ್ತೇವೆ. ಅ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-13) ಫ್ರಾಸಾ-5 ಬಂದಯ್ಯ ಸ್ವಾಮಿ ತಂದೆ ಬಸ್ಸಯ್ಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 17.04.2023 ರಂದು ಸಂಜೆ 07.15 ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ

ಚಾಸಾ-1 ರವರು ಠಾಣೆಗೆ ಹಾಜರಾಗಿ ಪಂಚನಾಮೆ ಮತ್ತು ಮುಮಾಗಳನ್ನು ನೀಡಿದ್ದು ಸದರಿ ಜ್ಞಾಪನ ಪತ್ರದ ಆಧಾರದ ಮೇಲೆ ಠಾಣ ಗುನ್ನ ನಂ.44/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-14) ಫ್ರಾಸಾ-5 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿ ನಿರೀಕ್ಷಣ ಜಾಮೀನು ಪಡೆದುಕೊಂಡು ಬಂದಿದ್ದು ಠಾಣ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 18.05.2023 ರಂದು ಮಾದರಿ ಮಧ್ಯವನ್ನು ರಾಸಾಯನಿಕ ಪರೀಕ್ಷ ಕುರಿತು ಕಳಿಸಿಕೊಟ್ಟಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-15) ಫ್ರಾಸಾ-5 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ದಿನಾಂಕ 03.07.2023 ರಂದು ರಾಸಾಯನಿಕ ಪರೀಕ್ಷ ವರದಿ ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ಅಂತಿಮ ವರದಿ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-16) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-16) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 12-03-2026 ಹಿರಿಯ ಸಿವಿಲ್ ನ್ಯಾಯಾಧೀಶರು
ಸ್ಥಳಃ ದೇವದುರ್ಗ. ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.